# ಭಾರತೀಯ ರಿಸರ್ವ್ ಬ್ಯಾಂಕ್

ಜುಲೈ 04, 2018

## ಸಂಶಯಾಸ್ಪದ ಇ-ಅಂಚೆಗಳ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ಎಚ್ಚರಿಕೆ ನೀಡಿದೆ

ಭಾರತೀಯ ರಿಸರ್ವ್ ಬ್ಯಾಂಕಿನ ಹೆಸರು ಬಳಸಿಕೊಂಡು ಹಲವು ನೀತಿ ಬಾಹಿರ ವ್ಯಕ್ತಿಗಳು ಸಾರ್ವಜನಿಕರನ್ನು ಮೋಸಪಡಿಸುತ್ತಿರುವ ಚಟುವಟಿಕೆಗಳ ಬಗ್ಗೆ ಭಾ.ರಿ.ಬ್ಯಾಂಕ್ ಆಗಿಂದಾಗ್ಗೆ ಒತ್ತಿ ಹೇಳುತ್ತಲೇ ಇದೆ. ಈ ವಂಚಕರು ಭಾರತೀಯ ರಿಸರ್ವ್ ಬ್ಯಾಂಕಿನ ನಕಲಿ ಲೆಟರ್ ಹೆಡ್ ಅನ್ನು ಬಳಸಿಕೊಳ್ಳುತ್ತಿದ್ದಾರೆ ಮತ್ತು ಬ್ಯಾಂಕಿನ ಸಿಬ್ಬಂಧಿ ಎಂದು ಹೇಳಿಕೊಂಡು ಇ-ಅಂಚೆಗಳನ್ನು ಕಳುಹಿಸಿ ಸಂಶಯಾಸ್ಪದ ಕೊಡುಗೆ/ಲಾಟರಿ ಬಹುಮಾನ /ವಿದೇಶದಿಂದ ಕಡಿಮೆ ಬಡ್ಡಿ ದರದ ನಿಧಿಯಂತಹ ಆಮಿಷಗಳನ್ನು ಒಡ್ಡಿ ಜನರನ್ನು ಸೆಳೆಯುತ್ತಿದ್ದಾರೆ. ಹೀಗೆ ಸಂಪರ್ಕಿಸಲ್ಪಟ್ಟ ವ್ಯಕ್ತಿಗಳಿಗೆ ಕರೆನ್ಸಿ ಸಂಸ್ಕಾರಣಾ ಶುಲ್ಕ, ವಿದೇಶಿ ಹಣ ಪರಿವರ್ತನಾ ಶುಲ್ಕ, ಮುಂಗಡ ಪಾವತಿ ಮುಂತಾದ ನೆಪಗಳಿಂದ ಹಣ ಸುಲಿಗೆ ಮಾಡುತ್ತಾರೆ. ಇಂತಹ ಸಂಶಯಾಸ್ಪದ ಇ-ಅಂಚೆಗಳ ಬಗ್ಗೆ, ಭಾರತೀಯ ರಿಸರ್ವ್ ಬ್ಯಾಂಕ್, ಎಸ್ ಎಂ ಎಸ್, ಹೊರಾಂಗಣ ಜಾಹೀರಾತು ಮತ್ತು ದೂರದರ್ಶನದ ಮುಂತಾದ ಹಲವಾರು ವಿಧಾನಗಳ ಮೂಲಕ "ಸಾರ್ವಜನಿಕ ತಿಳುವಳಿಕೆ ಅಭಿಯಾನ" ಡ ಒಂದು ಭಾಗವಾಗಿ ಸಾರ್ವಜನಿಕರಿಗೆ ತಿಳುವಳಿಕೆ ನೀಡುತ್ತಲಿದೆ.

**ಭಾರತೀಯ ರಿಸರ್ವ್ ಬ್ಯಾಂಕ್ ಕೆಳಕಂಡ ವಿಷಯಗಳನ್ನು ಒತ್ತಿ ಹೇಳುತ್ತಿದೆ.**

- ಸಾರ್ವಜನಿಕರ ಯಾವುದೇ ಖಾತೆಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಹೊಂದುವುದಿಲ್ಲ
- ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳ ಹೆಸರನ್ನು ಹೋಲುವ ನಕಲಿ ಹೆಸರುಗಳ ಬಗ್ಗೆ ಎಚ್ಚರಿಕೆಯಿಂದ ಇರಿ
- ಲಾಟರಿ ಬಹುಮಾನ/ವಿದೇಶಿ ಮೂಲದ ನಿಧಿಯ ಆಗಮನದ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಯಾರೂ ಸಾರ್ವನಿಕರಿಗೆ ಕರೆ ಮಾಡುವುದಿಲ್ಲ
- ಭಾರತೀಯ ರಿಸರ್ವ್ ಬ್ಯಾಂಕ್, ಲಾಟರಿ ಬಹುಮಾನದ ಹಣ, ನಿಧಿ ಮುಂತಾದವುಗಳು ಬಂದಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಯಾವ ಇ-ಅಂಚೆಯನ್ನೂ ಕಳುಹಿಸುವುದಿಲ್ಲ
- ಲಾಟರಿ ಬಹುಮಾನ /ವಿದೇಶದಿಂದ ಕಡಿಮೆ ಬಡ್ಡಿ ದರದ ನಿಧಿ ಆಗಮನ ಮುಂತಾದ ಸಂಶಯಾಸ್ಪದ ಕೊಡುಗೆಗಳ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ಯಾವುದೇ ಎಸ್ ಎಂ ಎಸ್ ಅಥವಾ ಪತ್ರ ಅಥವಾ ಇ-ಅಂಚೆಯನ್ನು ಕಳುಹಿಸುವುದಿಲ್ಲ
- ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕೃತ ಹಾಗೂ ಅಸಲಿ ವೆಬ್ ತಾಣದ ವಿಳಾಸ (https://www.rbi.org.in/ ಅಥವಾ https://rbi.org.in/) ಆಗಿರುತ್ತದೆ. ಮತ್ತು ಸಾರ್ವಜನಿಕರು ವಿಳಾಸದ ಮೊದಲು 'Reserve Bank', RBI ಹಾಗೂ ನಕಲಿ ಚಿನ್ಹೆಳನ್ನು ಒಳಗೊಂಡ ನಕಲಿ ವೆಬ್ ತಾಣಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಮತ್ತು ಅವುಗಳಿಂದ ದೂರವಿರಬೇಕು
- ಇಂತಹ ವಂಶನೆಗಳ ಬಗ್ಗೆ ತಕ್ಷಣವೇ ಸ್ಥಳೀಯ ಪೊಲೀಸರಿಗೆ ಹಾಗೂ ಸೈಬಕ್ರೈಮ್ ಪ್ರಾಧಿಕಾರಕ್ಕೆ ತಿಳಿಸಬೇಕು

ಇಂತಹ ವ್ಯಕ್ತಿಗಳು/ಸಂಸ್ಥೆಗಳಿಂದ ಬಂದ ಸಂದೇಶಗಳಿಗೆ ಉತ್ತರಿಸಬಾರದದಂದು ಸಾರ್ವಜನಿಕರಿಗೆ ಸೂಚನೆ ನೀಡಲಾಗಿದೆ ಮತ್ತು ಆರ್‌ಬಿಐ ಹೆಸರಿನಲ್ಲಿ ಬರುವ ಈ-ಅಂಚೆಯ ಆಮಿಷಕ್ಕೆ ಬಲಿಯಾಗಬೇಡಿ ಎಂದೂ ಸೂಚಿಸಲಾಗಿದೆ.

**ಜೋಸ್ ಜೆ. ಕಟ್ಟೂರ್**

**ಪತ್ರಿಕಾ ಪ್ರಕಟಣೆ: 2018-2019/34**

ಮುಖ್ಯ ಮಹಾ ವ್ಯವಸ್ಥಾಪಕರು